ಓ ಎಸ್ ನಂ.70/2022
ಡಿ.ಡಬ್ಲ್ಯೂ-1 ಸಹದೇವಪ್ಪ ತಂದೆ ಕಾಶೀರಾಯ

(ಇಂದು ದಿನಾಂಕಃ 27-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಪಾಟೀ ಸವಾಲುಃ ಶ್ರೀ ಎ ಎಸ್ ಕೆ ವಕೀಲರಿಂದ.

ನನಗೆ ಕನ್ನಡ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಕಾಶೀರಾಯ ಆಗಿರುತ್ತದೆ. ನನ್ನ ಅಜ್ಜನ ಹೆಸರು ಸಹದೇವಪ್ಪ ಆಗಿರುತ್ತದೆ. ನನ್ನ ಅಜ್ಜ ಸಹದೇವಪ್ಪನ ಹೆಸರು ನನಗೆ ಇಟ್ಟಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ ೭೭ ಮತ್ತು ೭೮ ನೇರವಾಗಿ ನಮ್ಮ ಅಜ್ಜನಿಂದ ನನ್ನ ಹೆಸರಿನಲ್ಲಿ ಆಗಿವೆ ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ತಂದೆ ಕಾಶೀರಾಯರವರ ಹೆಸರಿನಲ್ಲಿ ಆಗಿದ್ದವು ಎನ್ನುತ್ತಾರೆ. ನನ್ನ ಅಜ್ಜ ಸಹದೇವಪ್ಪರವರು ೫ ಜನ ಅಣ್ಣ ತಮ್ಮಂದಿರು ಇದ್ದರು. ಸದರಿ ೫ ಜನರ ಹೆಸರು ನನಗೆ ಹೇಳಲು ನೆನಪಿಲ್ಲ.

೨. ನನ್ನ ಅಜ್ಜ ಸಹದೇವಪ್ಪನಿಗೆ ಭೀಮಶಾ, ಶರಣಪ್ಪ, ಅರ್ಜುನ ಮತ್ತು ಲಕ್ಷ್ಮಣ ಎಂಬ ಸಹೋದರರು ಇದ್ದರು ಎಂದರೆ ಸರಿ. ನನ್ನ ಅಜ್ಜ ಸಹದೇವಪ್ಪನ ತಂದೆಯಾದ ಪೀರಪ್ಪರವರಿಗೆ ಗರೂರ ಮತ್ತು ಕುಗನೂರ ಗ್ರಾಮಗಳಲ್ಲಿ ಆಸ್ತಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಕುಗನೂರ ಗ್ರಾಮದಲ್ಲಿ ಸರ್ವೆ ನಂಬರ ೭೮ ರಲ್ಲಿ ಲಕ್ಷ್ಮಣ ಮತ್ತು ಭೀಮಶಾರವರಿಗೆ ತಲಾ ೨ ಎಕರೆ ೨೮ ಗುಂಟೆ ಆಸ್ತಿ ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಕುಗನೂರ ಗ್ರಾಮದ ಸರ್ವೆ ನಂಬರ ೭೮ ರಲ್ಲಿ ನನ್ನ ಆಸ್ತಿ ಇದೆ ಎಂದರೆ ಸರಿ. ಸರ್ವೆ ನಂಬರ ೭೭ ಮತ್ತು ೭೮ ರ ಎರಡು ಜಮೀನುಗಳಲ್ಲಿ ಸ್ಟೇಷನ್ ಗಾಣಗಾಪೂರದಿಂದ ಚೌಡಾಪೂರಕ್ಕೆ ಹೋಗುವ ರಸ್ತೆ ಹಾದುಹೋಗಿದೆ ಎಂದರೆ ಸರಿ.

೩. ಸರ್ವೆ ನಂಬರ ೭೮ ರಲ್ಲಿ ನನಗೆ ೪ ಎಕರೆ ೨೭ ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ೬ ಎಕರೆ ೪ ಗುಂಟೆ ಜಮೀನು ಇರುತ್ತದೆ ಎನ್ನುತ್ತಾರೆ. ಸರ್ವೆ ನಂಬರ ೭೭ ರಲ್ಲಿ ನಮಗೆ ೬ ಎಕರೆ ಚಿಲ್ಲರೆ ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ ೭೭ ಮತ್ತು ೭೮ ರಲ್ಲಿ ಒಟ್ಟು ನಮಗೆ ೧೧ ಎಕರೆ ೨೭ ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ೧೨ ಎಕರೆ ೨೭ ಗುಂಟೆ ಜಮೀನು ಇರುತ್ತದೆ ಎನ್ನುತ್ತಾರೆ. ೧೯೭೭ ರಿಂದ ೧೯೮೫ ರ ಮದ್ಯದಲ್ಲಿ ಪೀರಪ್ಪನವರ ೫ ಜನ ಮಕ್ಕಳಲ್ಲಿ ವಿಭಾಗ ಆಗಿತ್ತು ಎಂದರೆ ಸರಿ. ಸರ್ವೆ ನಂಬರ ೭೮ ರಲ್ಲಿ ಭೀಮಶಾರವರಿಗೆ ೨ ಎಕರೆ ೨೩ ಗುಂಟೆ ನೀಡಲಾಗಿತ್ತು ಎಂದರೆ ಸರಿ. ಭೀಮಶಾರವರಿಗೆ ಗರೂರ ಗ್ರಾಮದಲ್ಲಿನ ಸರ್ವೆ ನಂಬರ ೨೯ ರಲ್ಲಿ ೧೦ ಎಕರೆ ೨೦ ಗುಂಟೆ ಜಮೀನು ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

೪. ಪೀರಪ್ಪರವರ ಮಗ ಅರ್ಜುನರವರಿಗೆ ಸರ್ವೆ ನಂಬರ ೭೭ ರಲ್ಲಿ ೧೩ ಎಕರೆ ೨೦ ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ೧೨ ಎಕರೆ ೨೮ ಗುಂಟೆ ಜಮೀನು ಅವರ ಪಾಲಿಗೆ ಬಂದಿರುತ್ತದೆ ಎನ್ನುತ್ತಾರೆ. ನಮ್ಮ ತಾತ ಸಹದೇವಪ್ಪರವರಿಗೆ ಸರ್ವೆ ನಂಬರ ೭೮ ರಲ್ಲಿ ೪ ಎಕರೆ ೨೭ ಗುಂಟೆ ಜಮೀನು ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ೬ ಎಕರೆ ೪ ಗುಂಟೆ ನಮ್ಮ ತಾತನ ಪಾಲಿಗೆ ಬಂದಿತ್ತು ಎನ್ನುತ್ತಾರೆ. ಸರ್ವೆ ನಂಬರ ೭೭ ರಲ್ಲಿ ನಮ್ಮ ತಾತನಿಗೆ ೬ ಎಕರೆ ೩೪ ಗುಂಟೆ ಜಮೀನು ಪಾಲಿಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ ೭೭ ಈಗ ನಮ್ಮ ತಂದೆ ಮತ್ತು ನಮ್ಮ ಅಣ್ಣನ ಹೆಸರಿನಲ್ಲಿ ಇರುತ್ತದೆ. ನಮ್ಮ ತಂದೆ ಕಾಶೀರಾಯರವರಿಗೆ ೩ ಎಕರೆ ಚಿಲ್ಲರೆ ಗುಂಟೆ ಮತ್ತು ನಮ್ಮ ಅಣ್ಣನಾದ ಕಲ್ಯಾಣರವರ ಹೆಸರಿನಲ್ಲಿ ೩ ಎಕರೆ ಚಿಲ್ಲರೆ ಗುಂಟೆ ಜಮೀನು ಸರ್ವೆ ನಂಬರ ೭೭ ರಲ್ಲಿ ಈಗ ಇರುತ್ತದೆ.

೫. ಸರ್ವೆ ನಂಬರ ೭೮ ರಲ್ಲಿ ಲಕ್ಷ್ಮಣ ತಂದೆ ಪೀರಪ್ಪರವರಿಗೆ ೨ ಎಕರೆ ೨೮ ಗುಂಟೆ ಇದೆ ಎಂದರೆ ಸರಿ. ಗರೂರ ಗ್ರಾಮದ ಸರ್ವೆ ನಂಬರ ೨೯ ರಲ್ಲಿ ಲಕ್ಷ್ಮಣರವರಿಗೆ ೧೦ ಎಕರೆ ೨೦ ಗುಂಟೆ ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಶರಣಪ್ಪ ತಂದೆ ಪೀರಪ್ಪರವರಿಗೆ ಸರ್ವೆ ನಂಬರ ೭೮ ರಲ್ಲಿ ಮಾತ್ರ ೧೧ ಎಕರೆ ೨೭ ಗುಂಟೆ ಜಮೀನು ಪಾಲಿಗೆ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿ ಅವರಿಗೆ ಕೇವಲ ೮ ಎಕರೆ ೨೮ ಗುಂಟೆ ಮಾತ್ರ ಪಾಲಿಗೆ ಬಂದಿರುತ್ತದೆ ಎನ್ನುತ್ತಾರೆ.

೬. ಪೀರಪ್ಪರವರು ತನ್ನ ಮಕ್ಕಳಾದ ಅರ್ಜುನರವರಿಗೆ ೧೩ ಎಕರೆ ೨೦ ಗುಂಟೆ ಜಮೀನು, ನಮ್ಮ ತಾತ ಸಹದೇವಪ್ಪನಿಗೆ ೧೧ ಎಕರೆ ೨೭ ಗುಂಟೆ ಜಮೀನು, ಶರಣಪ್ಪ ತಂದೆ ಪೀರಪ್ಪರವರಿಗೆ ೧೧ ಎಕರೆ ೨೭ ಗುಂಟೆ ಜಮೀನು, ಲಕ್ಷ್ಮಣರವರಿಗೆ ೧೩ ಎಕರೆ ೨೮ ಗುಂಟೆ ಜಮೀನು ಮತ್ತು ಭೀಮಶಾರವರಿಗೆ ೧೩ ಎಕರೆ ೨೭ ಗುಂಟೆ ಜಮೀನು ನೀಡಿ ಪೀರಪ್ಪರವರು ಪಾಲು ಮಾಡಿದ್ದರು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.